ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 4.10.16

ಈ ವಾರದ ಮುನ್ಸೂಚನೆ (5.10.16 to 9.10.16 ವರೆಗೆ)

ನಿಯತಾಂಕಗಳು	5.10.16	6.10.16	7.10.16	8.10.16	9.10.16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	30	30	30	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	19	19	18
ಮೋಡ (ಪ್ರಮಾಣ)	5	5	3	4	7
ಅರ್ದ್ರತೆ ೭.೨೦ ಬೆ (ಶೇ)	96	98	95	98	98
ಅರ್ದ್ರತೆ ೨.೨೦ ಮ (ಶೇ)	56	54	51	48	54
ಗಾಳಿಯ ವೇಗ (ಕಿ.ಮಿ/ಗಂಟೆಗೆ)	11	13	11	10	11
ಗಾಳಿಯ ದಿಕ್ಕು (ಡಿಗ್ರಿ)	252	283	282	285	270

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ನಾಯನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶವು 30°C ಮತ್ತು ಕನಿಷ್ಠ 18–19°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 95-98 % ಇದ್ದು, ಮಧ್ಯಾಹ್ನ 48-56 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 10-13 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮಳೆಯಾದಲ್ಲಿ, ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಅವರೆ, ಹಿಂಗಾರು ಜೋಳ, ಮೇವಿನ ಜೋಳ, **ರಾಗಿ**(ನಾಟಿ) ಬೆಳೆಗಳನ್ನು ಬೆಳೆಯಬಹುದು.
- ಮಳೆಯ ಮುನ್ಸೂಚನೆ ಕಡಿಮೆ ಇರುವುದರಿಂದ ತರಕಾರಿ ಬೆಳೆಗಳಿಗೆ ಸಂರಕ್ಷಣಾ ಕ್ರಮವಾಗಿ ನೀರನ್ನು ಹಾಯಿಸಬೇಕು
- ಶೇ. 2 ರ ಪೊಟ್ಯಾಶಿಯಂ ದ್ರಾವಣವನ್ನು ಬೆಳೆಗಳ ಮೇಲೆ ಸಿಂಪಡಿಸುವುದು
- ಬೆಳೆಗಳನ್ನು ಮೇವಿಗಾಗಿ (ಮುಸುಕಿನ ಜೋಳ, ರಾಗಿ, ಹುರುಳಿ) ಅಥವಾ ತರಕಾರಿಗಾಗಿ (ತೊಗರಿ, ಅವರೆ, ಅಲಸಂದೆ) ಕಟಾವು ಮಾಡುವುದು
- ದ್ರಾಕ್ಷಿಯಲ್ಲಿ ಗೊಂಚಲಿನ ಗಾತ್ರ ಮತ್ತು ಹಣ್ಣುಗಳ ಗುಣಮಟ್ಟವನ್ನು ಹೆಚ್ಚಿಸಲು ಗೊಂಚಲಿನಲ್ಲಿ ಪೂರ್ತಿ ಹೂವು ಅರಳುವ ಹಂತದಲ್ಲಿ 20 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ ಮತ್ತು ನಂತರ ಕಾಯಿ ಕಚ್ಚುವ ಹಂತದಲ್ಲಿ (50 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ) ಜಿಬ್ಬೆರ್ಲಿಕ್ ಆಮ್ಲದ ದ್ರಾವಣದಲ್ಲಿ ಅದ್ದುವುದು ಸೂಕ್ತ.
- **ಕೃಷಿ ಹೊಂಡದ ನೀರಿನ ಸದ್ಬಳಕೆ**: ಕೃಷಿ ಹೊಂಡದಲ್ಲಿ ನೀರು ಲಭ್ಯವಿದ್ದಲ್ಲಿ, ತುಂತುರು ನೀರಾವರಿ ಪದ್ಧತಿಯಲ್ಲಿ ಬೆಳೆಗಳ ಸಂದಿಗ್ಧ ಹಂತಗಳಲ್ಲಿ ಪೂರೈಸುವುದು. ಏಕದಳ ಬೆಳೆಗಳಲ್ಲಿ ತೆಂಡೆ ಹೊಡೆಯುವ / ಹೂವಾಡುವ ಹಾಗೂ ಕಾಳು ತುಂಬುವ ಹಂತ, ದ್ವಿದಳ ಬೆಳೆಗಳಲ್ಲಿ ಹೂವಾಡುವ / ಕಾಳು ತುಂಬುವ ಹಂತದಲ್ಲಿ ನೀರುಣಿಸುವುದರಿಂದ ಬೆಳೆ ಸಂರಕ್ಷಿಸಬಹುದು.

ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು

ರಾಗಿ(ನಾಟಿ ಮಾಡುವುದು): ಇಂಡಾಫ್–7,9,15, ಕೆ.ಎಂ.ಆರ್–301 ,ಹುರುಳಿ: ಕೆ.ಬಿ.ಹೆಚ್–1(ಬಿ.ಜಿ.ಎಂ–1), ಪಿ. ಹೆಚ್.ಜಿ–9, **ಅಲಸಂದೆ** : ಕೆ,ಬಿ.ಸಿ–1,2, ಐಟಿ 98456–1 ,**ಅವರೆ**: ಹೆಚ್.ಎ–4, 3, **ಸೂರ್ಯಕಾಂತಿ** : ಕೆ.ಬಿ.ಎಸ್.ಹೆಚ್–41,42,44 , ಮಾರ್ಡೆನ್ , **ಹಿಂಗಾರು ಜೋಳ**: ಎಮ್ 15–1 , 35–1, ಮೂಗುತಿ (5–4–1) ಮತ್ತು ಸಿ .ಹೆಚ್.ಎಸ್–10(ಹೈಬ್ರಿಡ್), **ಮೇವಿನ ಜೋಳ** : ಎಂ.ಪಿ.ಚಾರಿ, ಪೂಸಾಚಾರಿ, ಜೆ.ಎಸ್–3, ಎಸ್–1049

ಸಸ್ಯ ಸಂರಕ್ಷಣೆ:

- ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಆಕ್ಟ್ರ (1ಗ್ರಾಂ/ಲೀ) ಅಥವಾ ಇಮಿಡಾಕ್ಲೋಪ್ರಿಡ್ (2.0 ಮಿ.ಲೀ/ಲೀ) ಅಥವಾ ಶೇ. 4ರಷ್ಟು ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.
- ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಅಥವಾ ಮಲ್ಟಿಪ್ಲೆಕ್ಸ್‌ನ ಲಘು ಪೋಷಕಾಂಶಗಳನ್ನು ಕೊಡಬೇಕು. ಗುಲಾಬಿಯಲ್ಲಿ ಎಲೆ ಹಾಗೂ ಮೊಗ್ಗು ತಿನ್ನುವ ಕೀಟ ಕಂಡುಬಂದಲ್ಲಿ 2 ಎಂ.ಎಲ್ ಮೆಲಾಥಿಯಾನ್ (500 ಮೀ. ಲೀ ಪ್ರತಿ ಎಕರೆಗೆ) ಸಿಂಪಡಿಸಿ, ಕಪ್ಪು ಎಲೆ ಚುಕ್ಕೆ ರೋಗ ಕಂಡು ಬಂದಲ್ಲಿ, 1 ಎಂ.ಎಲ್ ಪ್ರೋಪಿಕೊನೊಜೇಲ್ (200 ಮೀ. ಲೀ ಪ್ರತಿ ಎಕರೆಗೆ) ಸಿಂಪಡಿಸಿ.
- ನೆಲಗಡಲೆಯಲ್ಲಿ ಎಲೆ ಚುಕ್ಕೆ ರೋಗ ಕಂಡುಬಂದರೆ, ಕಾರ್ಬಂಡೈಜೀಮ್ ಅನ್ನು ಸಿಂಪಡಿಸಿ, ನೆಲಗಡಲೆಯಲ್ಲಿ ತುಕ್ಕು ರೋಗ ಕಂಡುಬಂದರೆ, ಕಾರ್ಬಕ್ಸಿನ್ (0.5 ಮೀ. ಲೀ ಪ್ರತಿ ಲೀಟರ್) ಅನ್ನು ಸಿಂಪಡಿಸಿ.
- ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (1ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.
- ಗೂಡು ಮಾಡುವ ಹುಳು ಕಂಡುಬಂದರೆ ಕ್ವಿನಾಲ್ಫಾಸ್ (2 ಮಿ. ಲೀ/ಲೀ) ಸಿಂಪಡಿಸಿ.
- ಎಲೆ ಕೋಸು ಹಾಗೂ ಹೂ ಕೋಸು ಬೆಳೆಗಳಲ್ಲಿ ಅಂಟು ದ್ರಾವಣ ಲೇಪಿಸಿದ ಹಳದಿ ಅಥವಾ ನೀಲಿ ಬಣ್ಣದ ಪೇಪರ್ ಅಥವಾ ಕಾರ್ಡ್ ಅನ್ನು ಹೊಲದಲ್ಲಿ ಅಲ್ಲಲ್ಲಿ ಇಡುವುದರಿಂದ ಕೀಟಗಳನ್ನು (ವಿಶೇಷವಾಗಿ ರಸಹೀರುವ ಕೀಟಗಳು) ಆಕರ್ಷಿಸಬಹುದು.

ನೋಡಲ್ ಅಧಿಕಾರಿ
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು